ಸಾಕ್ಷಿಯನ್ನು ದಿನಾಂಕ 15.11.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ ಟಿ.ಎಸ್.ಆರ್ ವಕೀಲರಿಂದಃ-**

1. ದಿಃ 03.05.2002 ರಂದು ಪುಟ್ಟಯ್ಯ ರವರು ನನಗೆ ಸೈಟ್ ನಂ.11 ನ್ನು ಮಾರಾಟ ಮಾಡಿರುತ್ತಾರೆ. ಪುಟ್ಟಯ್ಯನವರು ಬರೆದುಕೊಟ್ಟ ಕ್ರಯ ಪತ್ರ ನನ್ನ ಬಳಿ ಇದೆ. ನಾನು ಸೈಟ್ ನಂ.11 ನ್ನು 60 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದೇನೆ. ನಾನು ಸೈಟ್ ನಂ.11 ನ್ನು ಖರೀದಿ ಮಾಡುವ ಕಾಲಕ್ಕೆ ದಾವಾ ಎ ಷೆಡ್ಯೂಲ್ ಸ್ವತ್ತಿನಲ್ಲಿ ಸೈಟ್ ಗಳು ವಿಂಗಡಣೆ ಆಗಿದ್ದವು. ನಾನು ಸೈಟ್ ನಂ.11 ನ್ನು ಖರೀದಿ ಮಾಡುವ ಕಾಲಕ್ಕೆ ಲೇಔಟ್ ನಲ್ಲಿ ವಿದ್ಯುತ್, ನೀರಿನ ಸೌಲಭ್ಯ, ರಸ್ತೆ ಮತ್ತು ಚರಂಡಿ ಇತ್ತೇ ಎಂದರೆ ಸರಿ.ಈಗಾಲೂ ಲೇಔಟ್ ನಲ್ಲಿ ವಿದ್ಯುತ್, ನೀರಿನ ಸೌಲಭ್ಯ, ರಸ್ತೆ ಮತ್ತು ಚರಂಡಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ.

2. ನಾನು ಸೈಟ್ ನ್ನು ಖರೀದಿಸುವ ಕಾಲಕ್ಕೆ ದಾವಾ ಎ ಷೆಡ್ಯೂಲ್ ಸ್ವತ್ತು ಪುಟ್ಟಯ್ಯನ ಆಸ್ತಿ ಎಂದು ವಿಚಾರಣೆ ಮಾಡಿ ತಿಳಿದುಕೊಂಡಿದ್ದೇನೆ. ಸೈಟ್ ವಿಂಗಡಿಸಿದ ಸ್ವತ್ತು ಪುಟ್ಟಯ್ಯನಿಗೆ ಸೇರಿದ ಸ್ವತ್ತು ಎಂದು ತಿಳಿದುಕೊಳ್ಳಲು ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದು ನನ್ನ ಗಂಡನಿಗೆ ಗೊತ್ತು ಎಂದು ನುಡಿಯುತ್ತಾರೆ. ನನ್ನ ಗಂಡ ಇದ್ದಾರೆ. ಅವರನ್ನು ವಿಚಾರಣೆ ಮಾಡಬಹುದು. ಸೈಟ್ ಕೊಂಡುಕೊಳ್ಳು ವ ಕಾಲಕ್ಕೆ ಲೇಔಟ್ ಪ್ಲಾನ್ ಮಾಡಲಾಗಿತ್ತು. ಅದನ್ನು ನಾವು ಪಡೆದುಕೊಂಡಿದ್ದೇವೆ. ದಾವಾ ಎ ಷೆಡ್ಯೂಲ್ ಸ್ವತ್ತು ಭೂಪರಿವರ್ತನೆ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತು ಪುಟ್ಟಯ್ಯ ಮತ್ತು ಕುಟುಂಬದ ಸದಸ್ಯರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

3. ಪುಟ್ಟಯ್ಯ ಮತ್ತು ಗಂಗಬೈರಪ್ಪರವರ ನಡುವೆ 1990 ರಲ್ಲಿ ವಿಭಾಗವಾಗಿದ್ದು, ವಿಭಾಗದಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತು ಪುಟ್ಟಯ್ಯ ನ ಹೆಸರಿಗೆ ಬಂದಿದೆ ಎಂದರೆ ಸರಿ. 1978 ರಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಪುಟ್ಟಯ್ಯ ಮತ್ತು ಗಂಗಬೈರಪ್ಪರವರು ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತು ಪುಟ್ಟಯ್ಯ ಮತ್ತು ಕುಟುಂಬದ ಸದಸ್ಯರ ಮಧ್ಯೆ ಇಂದಿಗೂ ವಿಭಾಗವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಮಾಡುವ ಪೂರ್ವದಲ್ಲಿ ನಮಗೂ ಮತ್ತು ವಾದಿಗಳಿಗೂ ಘರ್ಷಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಎ ಷೆಡ್ಯೂಲ್ ಸ್ವತ್ತುಗಳು ಪುಟ್ಟಯ್ಯನ ಸ್ವಯಾರ್ಜಿತ ಸ್ವತ್ತುಗಳು ಅಲ್ಲ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ನೆಲಮಂಗಲ